ಸಾಕ್ಷಿಯನ್ನು ದಿ: 09.02.2026 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿ.ಡಬ್ಲ್ಯೂ-1

**ಪಾಟೀಸವಾಲುಃ- ಪ್ರತಿವಾದಿಗಳ ಪರ ವಕೀಲರಿಂದ:-**

1. ನಾನು ನಾಲ್ಕನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಪ್ರತಿವಾದಿಯರು ಪ್ರಸ್ತುತ ದಾವೆಯಲ್ಲಿ ಸಲ್ಲಿಸಿರುವ ತಕರಾರಿನ ಬಗ್ಗೆ ನನಗೆ ಗೊತ್ತು. ದಾವಾ ಆಸ್ತಿಯ ಸರ್ವೆ ನಂ.79 ಆದರೆ ಹಿಸ್ಸೆ ನಂಬರ್ ಗೊತ್ತಿಲ್ಲ. ದಾವಾ ಆಸ್ತಿಗಳ ಒಟ್ಟು ಅಳತೆ 1 ಎಕರೆ 19 ಗುಂಟೆ. ದಾವಾ ಆಸ್ತಿಯನ್ನು ನಾನು 20 ವರ್ಷಗಳ ಹಿಂದೆ ನಂಜುಂಡೇಗೌಡರವರಿಂದ ಖರೀದಿ ಮಾಡಿರುತ್ತೇನೆ. ದಾವಾ ಆಸ್ತಿಗಳನ್ನು ಖರೀದಿ ಮಾಡಿದಾಗ ಅಳತೆ ಮಾಡಿಸಿಲ್ಲ.

2. ದಾವಾ ಆಸ್ತಿಗಳನ್ನು ಅಳತೆ ಮಾಡಿಸಲು ತೊಂದರೆಯಿರಲಿಲ್ಲ. ದಾವಾ ಆಸ್ತಿಗಳ ಖಾತೆಯು 1 ನೇ ವಾದಿಯ ಹೆಸರಿನಲ್ಲಿದೆ. ದಾವಾ ಆಸ್ತಿಗಳ ಖಾತೆಯು 2011 ರಲ್ಲಿ ಆಗಿದ್ದು ಯಾವ ಎಂ.ಆರ್ ಅಡಿಯಲ್ಲಿ 1 ನೇ ವಾದಿಯ ಹೆಸರಿಗೆ ಬಂದಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ದಾವಾ ಆಸ್ತಿಗಳಲ್ಲಿ 1 ನೇ ವಾದಿಯು 4 ವರ್ಷಗಳ ಹಿಂದೆ ತೆಂಗಿನ ಸಸಿಗಳನ್ನು ನೆಟ್ಟಿದ್ದಾರೆ. ನಿಪಿ.9 ಮತ್ತು 10 ಭಾವಚಿತ್ರಗಳು 4 ವರ್ಷದ ತೆಂಗಿನ ಸಸಿಗಳ ಭಾವಚಿತ್ರಗಳಲ್ಲ ಎಂದರೆ ಸರಿಯಲ್ಲ. ನಾನು ಪಕ್ಕದ ಜಮೀನಿನಿಂದ 15 ಅಡಿ ಜಾಗಬಿಟ್ಟು ತೆಂಗಿನ ಸಸಿಗಳನ್ನು ನೆಟ್ಟಿದ್ದೇನೆ.

3. ಪ್ರತಿವಾದಿಯರು ದಾವಾ ಆಸ್ತಿಯಿಂದ 28 ತೆಂಗಿನ ಸಸಿಗಳನ್ನು ಕಿತ್ತು ಹಾಕಿದ್ದಾರೆ. ಅದಕ್ಕೆ ಸಂಬಂಧಿಸಿ ಪೋಲೀಸ್ ಠಾಣೆಯಲ್ಲಿ ದೂರು ನೀಡಿದ್ದೆವು ಆದರೆ ತೋಟಗಾರಿಕೆ ಇಲಾಖೆಗೆ ದೂರು ನೀಡಿಲ್ಲ. ದಾವಾ ಆಸ್ತಿಯ ಪಶ್ಚಿಮ ದಿಕ್ಕಿಗೆ ಪ್ರತಿವಾದಿಯರಿಗೆ ಸೇರಿದ 1 ಎಕರೆ 19 ಗುಂಟೆ ಜಮೀನು ಸರ್ವೆ ನಂ.79 ರಲ್ಲಿ ಇದೆ. ಸದರಿ ಆಸ್ತಿಯು ಪ್ರತಿವಾದಿಯರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಪ್ರಸ್ತುತ ದಾವೆ ಸಲ್ಲಿಸಲು ನಾನು ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ಪ್ರತಿವಾದಿ ತಮ್ಮ ಜಮೀನಿನ ಅಳತೆ ಮಾಡಿಸಿದಾಗ ನಮಗೆ ನೋಟೀಸು ಕೊಟ್ಟಿದ್ದರು ಎಂದರೆ ಸರಿಯಲ್ಲ.

4. ನಾವು ಎಂದು ದಾವಾ ಆಸ್ತಿಗಳ ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರ ಜಮೀನು ದಾವಾ ಆಸ್ತಿಗಳ ಉತ್ತರಕ್ಕೆ ಇದೆ ಎಂದರೆ ಸರಿ. ನಾವು ಪ್ರತಿವಾದಿಯರ

ಸ್ವಾಧೀನಾನುಭವಕ್ಕೆ ತೊಂದರೆ ಕೊಟ್ಟಿದ್ದೆವು ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯನ್ನು ಖರೀದಿ ಮಾಡಿರುವ ಬಗ್ಗೆ ವಾದಪತ್ರದಲ್ಲಿ ತಿಳಿಸಿಲ್ಲ ಎಂದರೆ ಸರಿಯಲ್ಲ. ತೆಂಗಿನ ಸಸಿಗಳನ್ನು ನೆಡಲು ನಾನು ತೋಟಗಾರಿಗೆ ಇಲಾಖೆಯಿಂದ ನಾನು ಅನುಮತಿ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಎಂದೂ ದಾವಾ ಆಸ್ತಿಗಳ ಅಳತೆ ಮಾಡಿಸಿ ಹದ್ದು ಬಸ್ತು ಮಾಡಿಸಿಲ್ಲ ಎಂದರೆ ಸರಿಯಲ್ಲ. ವಾಸ್ತವಾಂಶ ಗೊತ್ತಾಗುತ್ತದೆಂದು ನಾನು ಅಳತೆಗಾಗಿ ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

5. ದಾವಾ ಆಸ್ತಿಗಳಿಗೆ ಸಂಬಂಧಿಸಿದ ಹಿಸ್ಸಾ ಟಿಪ್ಪಣಿ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಚೆಕ್ಕುಬಂದಿಗಳನ್ನು ಪ್ರತ್ಯೇಕವಾಗಿ ಕಾಣಿಸಿಲ್ಲ ಹಾಗೂ ಚೆಕ್ಕುಬಂದಿಯಲ್ಲಿ ಬಾಜುದಾರರ ಹೆಸರು ಕಾಣಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪೂರ್ವ ಹಾಗೂ ಪಶ್ಚಿಮದಲ್ಲಿ ರಾಜು ಹಾಗೂ ನಾಗಣ್ಣರವರ ಆಸ್ತಿಯಿದೆ. ದಾವಾ ಆಸ್ತಿಯ ಉತ್ತರಕ್ಕೆ ರಾಜುರವರ ಜಮೀನಿದೆ. ದಾವಾ ಆಸ್ತಿಯ ಗುರುತಿಗಾಗಿ ನ್ಯಾಯಾಲಯದಿಂದ ಅಳತೆ ಮಾಡಿಸಲು ತೊಂದರೆಯಿಲ್ಲ ಎಂದರೆ ಸರಿ. ನಾನು ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಉದ್ದೇಶಪೂರ್ವಕವಾಗಿ ಪ್ರಸ್ತುತ ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ.

6. ನಿಪಿ.9 ಮತ್ತು 10 ಭಾವಚಿತ್ರಗಳು ದಾವ ಆಸ್ತಿಗೆ ಸಂಬಂಧಿಸಿದೆ ಎಂದು ಕಂಡು ಬರುತ್ತಿಲ್ಲ ಎಂದರೆ ಸರಿಯಲ್ಲ. ನರ್ಸರಿಯಲ್ಲಿರುವ ತೆಂಗಿನ ಸಸಿಗಳ ಭಾವಚಿತ್ರ ತೆಗೆದು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯರು ದಾವಾ ಆಸ್ತಿಯ ದಕ್ಷಿಣಕ್ಕೆ ಇರುವ ಸರ್ವೆ ನಂ.79/6 ರಲ್ಲಿನ 2 ಎಕರೆ 32 ಗುಂಟೆ ಇರುವ ತಮ್ಮ ಜಮೀನನ್ನು ಮಾರಾಟ ಮಾಡಿದ್ದರೆಂದರೆ ಸರಿ. ಸದರಿ ಖರೀದಿದಾರರಾದ ಎ ಕೃಷ್ಣರವರು ಸದರಿ ಆಸ್ತಿಯ ಸ್ವಾಧೀನದಲ್ಲಿದ್ದು ಆಸ್ತಿಗೆ ಸಂಬಂಧಿಸಿ ಅಳತೆ ಮಾಡಿಸಲು ನನಗೆ ನೋಟೀಸು ಕೊಟ್ಟಿದ್ದರು ಎಂದರೆ ಸರಿ. ಆದರೂ ನಾನು ಸದರಿ ನೋಟೀಸನ್ನು ಸ್ವೀಕರಿಸದೆ ತಿರಸ್ಕಾರ ಮಾಡಿದ್ದೇನೆಂದರೆ ಸರಿಯಲ್ಲ.

7. ಸದರಿ ಎ ಕೃಷ್ಣರವರು ಖರೀದಿ ಮಾಡಿದ ಆಸ್ತಿಗೆ ಅಳತೆ ಮಾಡಿಸಿ ಹದ್ದುಬಸ್ತು ಮಾಡಿಸಿ, ಕಾಂಪೌಂಡ್ ಗೋಡೆ ನಿರ್ಮಿಸಿ ಸದರಿ ಆಸ್ತಿಯ ಸ್ವಾಧೀನದಲ್ಲಿದ್ದಾರೆ ಹಾಗೂ ಎಂ ಆರ್

ನಂ.49/2008-09 ರಂತೆ ಸದರಿ ಆಸ್ತಿಯ ಪಹಣಿ ಕೃಷ್ಣರವರ ಹೆಸರಿಗೆ ಬಂದಿದೆ ಎಂದರೆ ಸರಿ. ಆಗ ನಾವು ಪೋಲೀಸರಿಗೆ ಯಾವುದೇ ದೂರು ನೀಡಿಲ್ಲ ಎಂದರೆ ಸರಿ. ಯಾವಾ ದೂರನ್ನು ನೀಡಿದ್ದೇನೆಂದು ಹೇಳಲು ಆಗುವುದಿಲ್ಲ. ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ನ್ಯಾಯಾಲಕ್ಕೆ ಹಾಜರು ಪಸಿಡಿಲ್ಲ ಎಂದರೆ ಸರಿಯಲ್ಲ. ಸದರಿ ಎ ಕೃಷ್ಣರವರು ಪ್ರಸ್ತುತ ದಾವೆಯಲ್ಲಿ ಪಕ್ಷಗಾರರಲ್ಲ.

8. ದಾವಾ ಆಸ್ತಿಗೆ ಸಂಬಂಧಿಸಿದ ಹಕ್ಕಿನ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಸಿಡಿಲ್ಲ ಎಂದರೆ ಸರಿಯಲ್ಲ. ಈ ದಾವೆಯ ಸಲುವಾಗಿ ದಾಖಲೆಗಳನ್ನು ಸೃಷ್ಠಿಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ಲಪಟಾಯಿಸುವ ಉದ್ದೇಶದಿಂದ ಪ್ರಸ್ತುತ ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ನಾನು ಎಂದೂ ದಾವಾ ಆಸ್ತಿಯ ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ